**OS No. 34/2016**
**ಪಿ.ಡಬ್ಲ್ಯೂ: 3**

**ದಿನಾಂಕ 07-10-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಗೆ ಕನ್ನಡ ಬರದೇ ಇರುವ ಕಾರಣ ಶ್ರೀ ಎಮ್ ಎ ಎ ವಕೀಲರನ್ನು ಹಿಂದಿಯಿಂದ ಕನ್ನಡಕ್ಕೆ ಭಾಷಾಂಸರಿಸಲು ನೇಮಕ ಮಾಡಲಾಯಿತು.**

**ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ. ಜಿ.ವಿ.ಎ. ವಕೀಲರಿಂದಃ**

1. ವಾದಿಯು ನನಗೆ ಸ್ನೇಹಿತನಾಗಬೇಕು. ನನ್ನ ಮತ್ತು ವಾದಿಯ ಸ್ನೇಹ 30 ರಿಂದ 40 ವರ್ಷದವರೆಗೆ ಇದೆ. ದಿನಾಂಕಃ 02-06-1999 ರ ಕರಾರು ಪತ್ರದ ವಿಷಯವಾಗಿ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುತ್ತೇನೆ. ಸದರಿ ಕರಾರು ಪತ್ರವು ಜಾಗದ ವಿಷಯವಾಗಿ ಇರುತ್ತದೆ. ಸದರಿ ಜಾಗದ ಕ್ಷೇತ್ರ 12 ಎಕರೆ 20 ಗುಂಟೆ ಇತ್ತು. ಸದರಿ ಜಾಗವು ಜಮೀನು ಇತ್ತು. ಸದರಿ ಜಮೀನಿಗೆ ವಾದಿಗೆ ಯಾವುದೇ ಸಂಬಂದವಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮುಂದೆ ಕರಾರು ಪತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರವು ಪಾರ್ಟನರ ಶಿಪ್‌ಗಾಗಿ ತೆಗೆದುಕೊಳ್ಳಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಾರ್ಟನರ ಶಿಪ್ ಸಲುವಾಗಿ ಅಮರ ಚಾವುಸ ಗೆ ಹಣದ ಅವಶ್ಯಕತೆ ಇರುವುದರಿಂದ ಆದ್ದರಿಂದ ಸದರಿ ನಿಪಿ-1 ಆಗಿರುತ್ತದೆ. ನಿಪಿ-1 ಮಾಡುವಾಗ 2 ಲಕ್ಷ 11 ಸಾವಿರ ರೂಪಾಯಿ ನೀಡಿರುತ್ತಾರೆ. ಸದರಿ ನಿಪಿ-1 ಮಾಡುವಾಗ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. ಸದರಿ ನಿಪಿ-1 ರ ಸಲುವಾಗಿ ಹಣ ನೀಡಿದ್ದರ ಬಗ್ಗೆ ರಶೀದಿ ಇರುವುದಿಲ್ಲ. ಸದರಿ ನಿಪಿ-1 ನ್ನು ಜರುಗಿಸುವಾಗ ಅಮರ ಚಾವುಸ ಮತ್ತು ಅವನ ಹೆಂಡತಿ ಮತ್ತು ಮಕ್ಕಳು ಇದ್ದರು ಆದ್ದರಿಂದ ರಶೀದಿ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಎಷ್ಟು ದಿನದ ನಂತರ ನೊಂದಣಿ ಮಾಡಿಕೊಳ್ಳಲು ಸಮಯ ಇರುತ್ತದೆ ಎಂಬುದರ ಬಗ್ಗೆ ಮಾಹಿತಿ ನನಗೆ ಇಲ್ಲ. ಸದರಿ ನಿಪಿ-1 ನೊಂದಣಿಯಾಗಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ನಿಪಿ-1 ರಲ್ಲಿ ಕಬ್ಜಾ ನೀಡಿದ್ದರ ಬಗ್ಗೆ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಸ್ವಾದೀನವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-1 ರ ನಂತರ ಕಬ್ಜಾವನ್ನು ಪಡೆದುಕೊಂಡಿರುತ್ತಾರಾ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

3. ಅಸಲು ದಾವೆ ನಂಬರ 133/2003 ದಾವಾ ಹೂಡಿ ನಾನು ಮಾಲೀಕ ಇರುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-1 ರ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲದಿದ್ದರೂ ಕೂಡ ನಾನು ವಾದಿಯ ಸ್ನೇಹಿತನಾಗಿರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**

**OS No. 34/2016**
**ಪಿ.ಡಬ್ಲ್ಯೂ: 4**

**ದಿನಾಂಕ 07-10-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

-

**ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ. ಜಿ.ವಿ.ಎ. ವಕೀಲರಿಂದ:**

1. ಸದರಿ ನಿಪಿ-1 ಮಾರಾಟ ಪತ್ರವೋ ಅಥವಾ ಖರೀದಿ ಕರಾರು ಪತ್ರವೋ ಎಂದರೆ ಸಾಕ್ಷಿಯು ಖರೀದಿ ಕರಾರು ಪತ್ರ ಎಂದು ನುಡಿಯುತ್ತಾರೆ. ಸದರಿ ಖರಿದಿ ಕರಾರು ಪತ್ರದಲ್ಲಿ ಎಷ್ಟು ದಿನದವರೆಗೆ ಖರೀದಿ ನೊಂದಣಿ ಮಾಡಿದ್ದರ ಬಗ್ಗೆ ಬರೆಸಿರುವುದಿಲ್ಲ, ಸದರಿ ನಿಪಿ-1 ರಲ್ಲಿ ಕಬ್ಜೆ ನೀಡಿದ್ದರ ಬಗ್ಗೆ ಬರೆದಿರುತ್ತಾರೆ. ಸದರಿ ನಿಪಿ-1 ರಲ್ಲಿ ಬರೆದಿರುವ ಜಮೀನಿನಲ್ಲಿ ಮಾರಾಟ ಮಾಡಿದವರು ಮತ್ತು ಪಡೆದುಕೊಂಡವರು ಕಬ್ಜೆಯಲ್ಲಿ ಇರುತ್ತಾರೆ. ಸದರಿ ಖರೀದಿ ಕರಾರು ಪತ್ರದ ಅಡಿಯಲ್ಲಿ ಮಾರಾಟಗಾರ ಮತ್ತು ಖರೀದಿದಾರರ ಮಧ್ಯ ಯಾವಾಗದಿಂದ ತಕರಾರು ನಡೆಯುತ್ತಿದೆ ಎಂದರೆ ಸಾಕ್ಷಿಯು ಕರಾರು ಪತ್ರವು ಬರೆದ 6 ತಿಂಗಳ ನಂತರ ಪ್ರಾರಂಭವಾಗಿರುತ್ತದೆ ಎಂದು ನುಡಿಯುತ್ತಾರೆ.

2. ಸದರಿ ಖರೀದಿ ಕರಾರು ಪತ್ರದ ಬಗ್ಗೆ ಮುಂಚೆ ಅಸಲು ದಾವೆ ನಂಬರ 133/2003 ರ ಬಗ್ಗೆ ಮಾಹಿತಿ ಇದ್ದು, ಸದರಿ ಸಾಕ್ಷಿಯು ಸ್ವತಃ ದಾವೆಯು ವಾದಿಯು ಗೆದ್ದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಖರೀದಿದಾರನೇ ನಾನೇ ಮಾಲೀಕನೆಂದು ಹೂಡಿರುತ್ತಾನೆ ಎಂಬ ವಿಷಯ ನನಗೆ ಗೊತ್ತಿದೆ. ಸದರಿ ನಿಪಿ-1 ನೊಂದಣಿಯಾಗಿರುತ್ತದೆ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಸಲು ದಾವಾ ನಂಬರ 133/2003 ರ ತೀರ್ಪಿನ ವಿರುದ್ದ ಸಲ್ಲಿಸಿದ ಮೇಲ್ಮನವಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯು ಮೇಲ್ಮನವಿ ಸೋತ ನಂತರ ಸದರಿ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**